ಬೆಳಗಾವಿ ಪೊಲೀಸರಿಂದ ಸ್ವಯಂ ಪ್ರೇರಿತ ಸುಳ್ಳು ಪ್ರಕರಣ ದಾಖಲು

837 (717) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಪೊಲೀಸ್ ಅಧಿಕಾರಿಗಳು ಶಾಸಕ ಶ್ರೀ ಅಭಯ ಪಾಟೀಲ ಇವರ ಮೇಲೆ ಸ್ವಯಂ ಪ್ರೇರುತ ಸುಳ್ಳು ಪ್ರಕರಣ ದಾಖಲು ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಆರ್. ಅಶೋಕ (ಗೃಹ ಮತ್ತು ಸಾರಿಗೆ ಸಚಿವರು) :

ಅ) ಶ್ರೀ ಅಭಯ ಪಾಟೀಲ ಇವರ ವಿರುದ್ಧ ಬೆಳಗಾವಿ ಪೊಲೀಸ್ ಅಧಿಕಾರಿಗಳು ಯಾವುದೇ ಸ್ವಯಂ ಪ್ರೇರಿತ ಸುಳ್ಳು ಪ್ರಕರಣಗಳನ್ನು ದಾಖಲಿಸಿರುವುದಿಲ್ಲ.

ಆ) ಮೇಲಿನ ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

Hassan Institute of Medical Science ನಲ್ಲಿ ಉಪಕರಣಗಳ ಖರೀದಿ

838 (718) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) Hassan Institute of Medical Science ನಲ್ಲಿ ಪ್ರಸಕ್ತ ವರ್ಷದಲ್ಲಿ ಎಷ್ಟು Ventilators ಖರೀದಿ ಮಾಡಲಾಗಿದೆ; ಖರೀದಿಗಿಂತ ಮೊದಲು ಆಸ್ಪತ್ರೆಯಲ್ಲಿ ಲಭ್ಯವಿದ್ದ Ventilators ಗಳ ಸಂಖ್ಯೆ ಎಷ್ಟು; ಹೊಸದಾಗಿ ಖರೀದಿಸಿದ Ventilators ಗಳನ್ನು ಉಪಯೋಗಿಸಲು ಜಾಗದ ಕೊರತೆ ಇರುವುದು ನಿಜವೇ;

ಆ) Hassan Institute of Medical Science ನಲ್ಲಿ ಎಷ್ಟು Monitors ಗಳನ್ನು ಖರೀದಿಸಲಾಗಿದೆ; ಇದರಲ್ಲಿ Cardiac Monitors ಗಳು ಎಷ್ಟು ಮತ್ತು E.E.G Monitors ಗಳು ಎಷ್ಟು;

ಇ) ಈ ಉಪಪ್ರಕರಣಗಳನ್ನು ಯಾವ ಪೂರೈಕೆದಾರರಿಂದ ಎಷ್ಟು ಮೊತ್ತಕ್ಕೆ ಖರೀದಿಸಲಾಗಿದೆ ಮತ್ತು ಯಾವ ಪದ್ಧತಿಯಿಂದ ಖರೀದಿಸಲಾಗಿದೆ?

ಶ್ರೀ ಎಸ್.ಎ. ರಾಮದಾಸ್ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ರಸಕ್ತ ವರ್ಷದಲ್ಲಿ ಇದೂವರೆವಿಗೂ ಯಾವುದೇ Ventilators ಗಳನ್ನು ಖರೀದಿಸಿರುವುದಿಲ್ಲ. ಪ್ರಸ್ತುತ, ಈ ಆಸ್ಪತ್ರೆಯಲ್ಲಿ 11 Ventilators ಗಳು ಲಭ್ಯವಿರುತ್ತವೆ. ಹೊಸದಾಗಿ ಖರೀದಿಸಲಿರುವ Ventilators ಗಳನ್ನು ಉಪಯೋಗಿಸಲು ಜಾಗದ ಕೊರತೆ ಇರುವುದಿಲ್ಲ.

ಆ) ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 04 Monitors ಗಳನ್ನು 2009–10 ನೇ ಸಾಲಿನಲ್ಲಿ ಖರೀದಿಸಲಾಗಿದೆ. ಇವುಗಳಲ್ಲಿ 04 Cardiac Monitors ಗಳಾಗಿವೆ. E.E.G Monitors ಗಳು ಯಾವುದೂ ಇರುವುದಿಲ್ಲ.

ಇ) Ventilators ಗಳನ್ನು ಹಾಗೂ Cardiac Monitors ಗಳನ್ನು Recorders and Medicare System Pvt. Ltd., Chndigarh ಇವರಿಂದ ಖರೀದಿಸಲಾಗಿದೆ. ಪ್ರತಿಯೊಂದು Ventilator ನ ಯೂನಿಟ್ ದರವು ರೂ.7,22,800/– ಗಳಾಗಿದ್ದು, Cardiac Monitors ಗಳ ಯೂನಿಟ್ ದರವು ರೂ.78,000/– ಗಳಾಗಿರುತ್ತದೆ. ಈ ಉಪಕರಣಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ 1999 ಹಾಗೂ ನಿಯಮಗಳು 2000 ರನ್ವಯ ಸರ್ಕಾರದ ಅನುಮೋದನೆ ಪಡೆದು ನಿಯಮಾನುಸಾರ ಖರೀದಿಸಲಾಗಿದೆ.

838 (718) Dr. Bagali Sarvabhouma Sathagaud : Minister for Medical Education,

a) During current year, how many Ventilators have been purchased in the Hassan Institute of Medical Science; Prior to purchase what is the number of Ventilators available in the hospital; Is it true that there is shortage of space for using the duly purchased Ventilators;

b) How many Monitors have been purchased in the Hassan Institute of Medical Sciences; Out of these, what is the number of Cardiac Monitors and E.E.G. Monitors;

c) From which suppliers these equipments have been purchased and what is the costs and what procedure has been followed for purchasing them?

Sri S.A. Ramadass (Minister for Medical Education):

a) During the current year, till now, no Ventilators have been purchased in the Hassan Institute of Medical Sciences. At present, in this hospital 11 Ventilators are available. There is no shortage of space for using the Ventilators that will be purchased.

b) During the year 2009-10, 04 Monitors have been purchased in the Hassan Institute of Medical Sciences. All the 04 Monitors are Cardiac Monitors. There are no EEG Monitors.

c) Ventilators and Cardiac Monitors are purchased from Mrs.Recorders and Medicare System Pvt., Ltd., Chandigarh. The unit cost of each Ventilator is Rs.7.22.800/- and the unit cost of each Cardiac Monitor is Rs. 78,000/-. These equipments have been purchased with approval of Government duly following the KTPP Act, 1999 and relevant Rules 2000.

ಪಿ.ಎಸ್.ಪಿ. ವರ್ಗಾವಣೆಗೆ ನ್ಯಾಯಾಲಯದ ಮಾರ್ಗಸೂಚಿ ಸೂತ್ರಗಳು

839 (1054) ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಗೃಹ ಮತ್ತು ಸಾರಿಗೆ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ರವರ ವರ್ಗಾವಣೆ ಮತ್ತು ನಿಯೋಜನೆಯಲ್ಲಿ ಮಾನ್ಯ ನ್ಯಾಯಾಲಯಗಳು (ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯ) ಏನಾದರೂ ಮರ್ಗಸೂಚಿ ಸೂತ್ರಗಳನ್ನು ನೀಡಿದೆಯೇ;

ಆ) ಹಾಗಿದ್ದರೆ, ಆ ಮಾರ್ಗಸೂಚಿ ಸೂತ್ರಗಳು ಯಾವುವು;